# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 223/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 26-03-2026 ರಂದು ಪ್ರಮಾಣ ಮಾಡಿಸಲಾಯಿತು**

| | | |
|---|---|---|
| **ಸಾಕ್ಷಿಯ ಹೆಸರು** | ಃ ರಾಜೇಶ ಚವಾಣ | **ಪ್ರಾ.ಸಾ ಃ 05** |
| **ತಂದೆ ಃ ಗಂಡ ಹೆಸರು** | ಃ ಪ್ರೇಮನಾಥ | **ಚಾ.ಸಾ ಃ 07** |
| **ವಯಸ್ಸು** | ಃ 28 ವರ್ಷ | |
| **ಉದ್ಯೋಗ** | ಃ ಚಾಲಕ | |
| **ವಾಸಸ್ಥಳ** | ಃ ತುಮರಿಕೊಪ್ಪ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಚಾಸಾ-1, 4 ರಿಂದ 6, 8 ರಿಂದ 15 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

ಸುಮಾರು 3 ವರ್ಷಗಳ ಹಿಂದೆ ನಮ್ಮ ಊರಿನ ಅಂಗಡಿ ಮುಂದೆ ಚಾಸಾ-4 ರವರು ಕುಳಿತಿದ್ದಾಗ ಆರೋಪಿತರಲ್ಲಿ ಇಬ್ಬರು ಅವರನ್ನು ಹೊಡೆಯುತ್ತಿದ್ದರು. ಆಗ ಚಾಸಾ-12 ರವರು ಜಗಳ ಬಿಡಿಸಲು ಹೋದಾಗ ಆರೋಪಿತರು ಚಾಸಾ-12 ರವರಿಗೆ ಹೊಡೆಯಲು ಪ್ರಾರಂಭಿಸಿದರು. ಚಾಸಾ-15 ರವರು ಜಗಳ ಬಿಡಿಸಿ ಕಳುಹಿಸಿದರು. ಪುನಃ ಆರೋಪಿತರು ಚರ್ಚ ಹತ್ತಿರ ಬಂದು ಕಲ್ಲು, ಬಡಿಗೆ ತೆಗೆದುಕೊಂಡು ಬಂದು ತೂರಾಡಿರುತ್ತಾರೆ. ಜಗಳದಲ್ಲಿ ನನ್ನ ಎಡಗೈ ಭುಜದ ಮೇಲೆ ಬೆನ್ನ ಮೇಲೆ ಕಲ್ಲುಗಳಿಂದ ಹೊಡೆದಿದ್ದು ಗಾಯಗಳಾಗಿರುತ್ತವೆ. ನಂತರ ನಾನು ಒಂದು ಖಾಸಗಿ ವಾಹನದಲ್ಲಿ ಕಲಘಟಗಿ ಸರಕಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ದೂರನ್ನು ಯಾರು ಬರೆದಿದ್ದಾರೆ ಗೊತ್ತಿಲ್ಲ. ಘಟನೆ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನನ್ನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನಮ್ಮ ಮೇಲೆ ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆ ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲು-1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,*** *ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 07.03.2023 ರಂದು ಸಾಯಂಕಾಲ 6-30 ಕ್ಕೆ ಜಗಳ ಆಗಿತ್ತು ಅಂದರೆ ನಿಜ. ಆರೋಪಿತರು ಚಾಸಾ-4 ರವರ ಜೊತೆಗೆ ತಂಟೆ ಮಾಡಿ ಹಲ್ಲೆ ಮಾಡುತ್ತಿದ್ದರು ಅಂದರೆ ನಿಜ. ಜಗಳ ಆಗುವಾಗ ನಾನು, ಚಾಸಾ-1, 5, 6 ಮತ್ತು 8 ರಿಂದ 13 ರವರು ಜಗಳ ಬಿಡಿಸಲು ಹೋಗಿದ್ದೆವು ಅಂದರೆ ನಿಜ. ಆರೋಪಿತರು ಜಗಳ ಬಿಡಿಸಲು ನೀವು ಯಾರು ಇದರಲ್ಲಿ ಬರಬೇಡಿ ಎಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಕಳುಹಿಸಿರುತ್ತಾರೆ ಅಂದರೆ ನಿಜ. ಚಾಸಾ-8 ರವರು ತಂಟೆ ಮಾಡಬೇಡರಿ, ಎಲ್ಲರೂ ಸೇರಿಕೊಂಡು ಬಿಡಿಸೋಣ ಎಂದು ಹೇಳಿದರೂ ಕೂಡಾ ಆರೋಪಿತರು ಕೇಳಲಿಲ್ಲ ಅಂದರೆ ನಿಜ. ಆರೋಪಿತರು ತಮ್ಮ ಕೈಗಳಲ್ಲಿ ಬಡಿಗೆ ಹಾಗೂ ಕಲ್ಲುಗಳನ್ನು ಹಿಡಿದುಕೊಂಡಿದ್ದು 1 ನೇ ಆರೋಪಿ ಚಾಸಾ-8

ರವರ ನಿನಗೆ ಸೊಕ್ಕು ಬಹಳ ಇದೆ ಸೂಳೆಮಗನೆ ಎಂದು ತನ್ನ ಕೈಯಲ್ಲಿದ್ದ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾನೆ ಅಂದರೆ ನಿಜ. 2 ನೇ ಆರೋಪಿ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಕಲ್ಲಿನಿಂದ ಕಾಲಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಚಾಸಾ-6 ರವರ ತಲೆಗೆ 2 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. ಉಳಿದ ಆರೋಪಿತರು ತಮ್ಮ ಕೈಗಳಿಂದ ಹೊಡಿ ಬಡಿ ಮಾಡಿರುತ್ತಾರೆ ಅಂದರೆ ನಿಜ.

2 ನೇ ಆರೋಪಿ ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಮಾನಭಂಗ ಮಾಡಿರುತ್ತಾನೆ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಅಂದರೆ ನಿಜ. ಚಾಸಾ-11 ರವರಿಗೆ 1 ನೇ ಆರೋಪಿ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. ಉಳಿದ ಆರೋಪಿತರು ತಮ್ಮ ಕೈಯಿಂದ, ಬಡಿಗೆಯಿಂದ ನನ್ನ ಮೈಕೈಗಳಿಗೆ ಹಲ್ಲೆ ಮಾಡಿರುತ್ತಾರೆ ಅಂದರೆ ನಿಜ. 3 ನೇ ಆರೋಪಿಯು ಚಾಸಾ-9 ರವರ ಮೇಲೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 4 ನೇ ಆರೋಪಿ ಬಡಿಗೆಯಿಂದ ಚಾಸಾ-10 ರವರ ಮೇಲೆ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 7 ನೇ ಆರೋಪಿಯು ಚಾಸಾ-13 ರವರಿಗೆ ತನ್ನ ಕೈಯಲ್ಲಿದ್ದ ಬಡಿಗೆ ಹಾಗೂ ಕೈಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 5 ಮತ್ತು 6 ನೇ ಆರೋಪಿತರು ತಮ್ಮ ಕೈಯಲ್ಲಿ ಇದ್ದ ಬಡಿಗೆಯಿಂದ ಚಾಸಾ-12 ರವರಿಗೆ ಕೈಗಳಿಂದ ಮತ್ತು ಬಡಿಗೆಗಳಿಂದ ಹೊಡೆದು ಗಾಯ ಪಡಿಸಿರುತ್ತಾರೆ ಅಂದರೆ ನಿಜ. 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ಮೈಮೇಲೆ ಹಲ್ಲೆ ಮಾಡಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಿರುತ್ತಾರೆ ಅಂದರೆ ನಿಜ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಅಂದರೆ ನಿಜ. ಚಾಸಾ-14 ಮತ್ತು 15 ರವರು ಜಗಳ ಬಿಡಿಸಿಕೊಂಡಿರುತ್ತಾರೆ ಅಂದರೆ ನಿಜ. ಆರೋಪಿತರು ಹೋಗುವಾಗ ಈಗ ಉಳಿದುಕೊಂಡಿದ್ದಿರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಅಂದರೆ ನಿಜ.

**ಪಾಟೀ ಸವಾಲುಃ ಆರೋಪಿತರ ಪರಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**